ತೆಯ್ಯಮ್ ನೋಡಿದ್ದರು ಅಂತ ನನಗನ್ನಿಸುತ್ತದೆ!' ಗೋಪಾಲನ್‌ರ ಈ ಲಹರಿ ನನ್ನನ್ನೂ ಮಾತಿಗೆ ಹಚ್ಚಿಸಿತು – 'ಆದರೆ, ಆದಿಶಂಕರರು ಮೇಲ್ಜಾತಿಯ ನಂಬೂದರಿಗಳಲ್ಲವೆ? ಮತ್ತೆ ಈ ತೆಯ್ಯಮ್‌ಗಳು ತೀರಾ ಕೆಳಜಾತಿಗಳ ವಲಯದ್ದೆಂದು ನೀವೇ ಹೇಳಿದಿರಲ್ಲ?'

ಈ ಪ್ರಶ್ನೆ ಗೋಪಾಲನ್ ಅವರನ್ನು ಉತ್ತೇಜಿಸಿತು. ತಮ್ಮ ಎಂದಿನ ಹಾವಭಾವಗಳ ಸಮೇತ ಗಟ್ಟಿದನಿಯಲ್ಲೇ ಮಾತಾಡಲಾರಂಭಿಸಿದರು – 'ಹೊರಗಿನಿಂದ ನೋಡುವವರಿಗೆ ಹಾಗೆ ಕಂಡರೆ ಆಶ್ಚರ್ಯವಿಲ್ಲ. ಆದರೆ ನಾನು – ಅತ್ತ ನಂಬೂದರಿಯಷ್ಟು ಮೇಲೂ ಅಲ್ಲದ, ಇತ್ತ ಈ ತೆಯ್ಯಮ್ ಆಟದವರಷ್ಟು ಕೆಳಗೂ ಅಲ್ಲದ ನಡುಜಾತಿಯವ ನಾನು – ನನಗೆ, ಈ ಜಾತಿಪಟ್ಟಕದ ಎರಡೂ ಅಂಚುಗಳೂ ಬೇರೆ ರೀತಿಯಲ್ಲೇ ಕಾಣುವುದಿದೆ. ಈ ಪ್ರಾಂತ್ಯದ ಶೂದ್ರಾತಿಶೂದ್ರರ ಮನೆಗಳ ಒಳಗೂ ನಾನು ಓಡಾಡಿದ್ದೇನೆ; ಮತ್ತೆ, ಹತ್ತಾರು ಸಾಂಪ್ರದಾಯಿಕ ನಂಬೂದರಿ ಕುಟುಂಬಗಳು ನನಗೆ ಹತ್ತಿರದಿಂದ ಗೊತ್ತು. ಅವರ ಮತ್ತು ಇವರ ಆಚಾರ–ವಿಚಾರ, ಉಡುಗೆ–ಆಹಾರ, ಪೂಜೆ–ಪುನಸ್ಕಾರ ಇತ್ಯಾದಿಯೆಲ್ಲ ನೋಡಿದರೆ, ಒಂದು ವಿಚಿತ್ರ ಹೋಲಿಕೆ ನನಗಂತೂ ಕಾಣುತ್ತದೆ – ಆ ಅಲ್ಪಸಂಖ್ಯಾತ ನಂಬೂದರಿಗಳು ನಮ್ಮ ಕೇರಳ ಸಮಾಜದ ಅಪರೂಪದ ಒಂದು ಪುಟ್ಟ ದ್ವೀಪ... ಎಂಡ್, ಇಫ್ ಐ ಕ್ಯಾನ್ ಯೂಸ್ ಎ ರಾಂಗ್ ಮೆಟಫರ್, ಅವರು ಆಧುನಿಕತೆಯ ನಡುವೆಯೂ ಉಳಿದಿರುವ ಪುರಾತನಕಾಲದ ಒಂದು ಷೆಡ್ಯೂಲ್ಡ್ ಟ್ರೈಬ್!' ಗೋಪಾಲನ್ ಅವರ ಅಪರೂಪಕವು ತಟ್ಟನೆ ನನ್ನ ಮನಸ್ಸಿಗೆ ತಾಗಿ ನಮ್ಮ ಸಮಾಜ–ಸಂಸ್ಕೃತಿಗಳ ಸಂಬಂಧ ಕುರಿತ ಬೇರೊಂದು ಲಹರಿಯನ್ನೇ ಎಬ್ಬಿಸಿತು – ಅದನ್ನೇ ಧ್ಯಾನಿಸುತ್ತ ನಾನು ಮೌನವಾದೆ.

ಕಾರು ಕಣ್ಣೂರನ್ನು ಸಮೀಪಿಸುತ್ತಿತ್ತು. ಬೆಳಗಿನ ಜಾವದ ಆ ತೆಳುಮಂಜಿನಲ್ಲಿ ಹೆದ್ದಾರಿಯ ಆಚೆಯ ತುದಿಗೆ ಪೇಟೆಯ ದೀಪಗಳು 'ದರ್ಪಣದೃಶ್ಯಮಾನನಗರೀತುಲ್ಯಂ...' ಎಂಬಂತೆ ಕಾಣಿಸಲಾರಂಭಿಸಿದ್ದವು. ಒಮ್ಮೆ ಸಶಬ್ದವಾಗಿ ಉಸಿರು ಬಿಡುತ್ತ ಗೋಪಾಲನ್, ಇದೇ ಕಡೆಯ ಮಾತೋ ಎಂಬಂತೆ ಹೇಳಿದರು – 'ಇಗೋ... ಇದೇ ಹೆದ್ದಾರಿಯಲ್ಲೇ ಇನ್ನೂ ಆರು ಗಂಟೆ ಪ್ರಯಾಣ ಮಾಡಿದರೆ ಆದಿಶಂಕರರ ಹುಟ್ಟೂರು ಸಿಗುತ್ತದೆ. ನೀನಲ್ಲಿಗೆ ಒಮ್ಮೆ ಹೋಗಬೇಕು'. 'ಹೌದು, ಹೋಗಬೇಕು; ಮುಂದಿನ ಬಾರಿ ಕೇರಳಕ್ಕೆ ಬಂದಾಗ ಹೋಗುತ್ತೇನೆ' – ಅಂದೆ.

ಅಷ್ಟರಮೇಲೆ ನಾನು ಹಲವು ಬಾರಿ ಕೇರಳಕ್ಕೆ ಹೋಗಿದ್ದೇನೆ; ಆದರೆ, ಯಾಕೋ ಕಾಲಟಿಗೆ ಹೋಗುವ ಯೋಗ ಇನ್ನೂ ಕೂಡಿಬಂದಿಲ್ಲ.

### ಕೆ.ವಿ. ಅಕ್ಷರ

ಲೇಖಕ, ರಂಗಕರ್ಮಿ ಅಕ್ಷರ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಹೆಗ್ಗೋಡಿನವರು. ದೆಹಲಿಯ ರಾಷ್ಟ್ರೀಯ ನಾಟಕ ಶಾಲೆ(ಎನ್‌ಎಸ್‌ಡಿ)ಯಿಂದ ಪದವಿ ಮತ್ತು ಇಂಗ್ಲೆಂಡಿನ ಲೀಡ್ಸ್ ವಿಶ್ವವಿದ್ಯಾಲಯದಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ತಂದೆ ಕೆ.ವಿ. ಸುಬ್ಬಣ್ಣ ಅವರು ಸ್ಥಾಪಿಸಿದ ರಂಗಸಂಸ್ಥೆ 'ನೀನಾಸಂ' (ನೀಲಕಂಠೇಶ್ವರ ನಾಟ್ಯಸೇವಾ ಸಂಘ) ಮತ್ತು 'ಅಕ್ಷರ ಪ್ರಕಾಶನ'ವನ್ನು ಪ್ರಸ್ತುತ ಅಕ್ಷರ ಅವರು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. 'ಮಾವಿನ ಮರದಲ್ಲಿ ಬಾಳೆಯ ಹಣ್ಣು', 'ರಂಗಭೂಮಿ ಮುಖಾಂತರ', 'ರಂಗ ಪ್ರಯೋಗ', 'ಸಹ್ಯಾದ್ರಿ ಕಾಂಡ', 'ರಂಗ ಪ್ರಪಂಚ', 'ಸಮ್ಮುಖದಲ್ಲಿ ಸ್ವಗತ', 'ಚೂರಿಕಟ್ಟೆ ಅರ್ಥಾತ್ ಕಲ್ಯಾಣಪುರ', 'ಶಂಕರ ವಿಹಾರ' ಅವರ ಕೆಲವು ಪುಸ್ತಕಗಳು. 'ಹದಿ ಹರೆಯದ ಹಾಡು' ಅವರ ಕವಿತೆಗಳ ಸಂಗ್ರಹವಾಗಿದೆ.